## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 34 ಯೋಉಮಾ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:28-03-2019.

## ಸುತ್ತೋಲೆ

**ವಿಷಯ:** ಕುಡಿಯುವ ನೀರು ಸರಬರಾಜು ಯೋಜನೆಗಳ ಅನುಷ್ಠಾನ ಕುರಿತು.

-

2018-19ರ ಸಾಲಿನಲ್ಲಿ ಗ್ರಾಮೀಣ ನೀರು ಸರಬರಾಜು ಯೋಜನೆಗಳ ಅನುಷ್ಠಾನ ಕುರಿತಂತೆ ಹಲವಾರು ಮಾರ್ಗಸೂಚಿಗಳನ್ನು ನೀಡಲಾಗಿದೆ ಮತ್ತು ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳಲ್ಲಿ ಕೈಗೊಂಡ ನಿರ್ಣಯಗಳ ಅನುಪಾಲನೆಗಾಗಿ ನಿರ್ಧಿಷ್ಟ ಸೂಚನೆಗಳನ್ನು ನೀಡಲಾಗಿದ್ದರೂ ಸಹಾ ಯೋಜನೆಗಳ ಅನುಷ್ಠಾನದಲ್ಲಿ ಗೊತ್ತುಪಡಿಸಿದ ಕಾಲಮಿತಿಯನ್ನು ಸಮಯೋಚಿತವಾಗಿ ಅನುಸರಿಸದಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳ ಈ ನಡವಳಿಕೆಯಿಂದ ಸಾರ್ವಜನಿಕ ಹಿತಾಸಕ್ತಿಯ ಯೋಜನೆಗಳು ನಿರೀಕ್ಷಿತ ಗುಣಮಟ್ಟದಲ್ಲಿ ಮತ್ತು ಕಾಲಮಿತಿಯೊಳಗೆ ಕಾರ್ಯಗತವಾಗುತ್ತಿಲ್ಲ. ನಾವೆಲ್ಲರೂ ಇಂತಹ ಸನ್ನಿವೇಶಗಳಿಗೆ ಆಸ್ಪದ ನೀಡದಂತೆ ಅತ್ಯಂತ ಜವಾಬ್ದಾರಿ ಮತ್ತು ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸುವ ಮೂಲಕ ಕಾಲಮಿತಿಯೊಳಗೆ ಮತ್ತು ಅನುಮೋದಿತ ಅಂದಾಜು ಮೊತ್ತದೊಳಗೆ ಉತ್ತಮ ಗುಣಮಟ್ಟದಲ್ಲಿ ಸಾರ್ವಜನಿಕ ಹಿತಾಸಕ್ತಿ ಕಾಮಗಾರಿಗಳು ಅನುಷ್ಠಾನವಾಗುವಂತೆ ನೋಡಿಕೊಳ್ಳಬೇಕಾಗಿದೆ. ಮುಂದುವರಿದ ಯೋಜನೆಗಳನ್ನು ಅಪೂರ್ಣ ಮಾಡಿಕೊಂಡು ಅಂದಾಜು ವೆಚ್ಚದಲ್ಲಿ ಹೆಚ್ಚಳ ಮಾಡಿಸಿ ಕಳಪೆ ಕಾಮಗಾರಿ ಮಾಡುವುದು ಮತ್ತು 2019-20ರ ಸಾಲಿನಲ್ಲಿ ಮುಂದುವರಿದ ಯೋಜನೆಗಳೆಂದು ಕ್ರಿಯಾ ಯೋಜನೆಯೊಳಗೆ ಅವಕಾಶ ಕಲ್ಪಿಸುವ ಪ್ರಕ್ರಿಯೆಗೆ ಕಡಿವಾಣ ಹಾಕಲು ಹಿಂದಿನ 2 ಪ್ರಗತಿ ಪರಿಶೀಲನಾ ಸಭೆಗಳ ನಡವಳಿಗಳಲ್ಲಿ ಲಿಖಿತ ಸೂಚನೆ ನೀಡಲಾಗಿದೆ. ಅದನ್ನು ಮುಂದುವರಿಸಿ ಕೆಳಕಂಡ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಿನ ಅನುಪಾಲನೆಗಾಗಿ ನೀಡಿದೆ:

1. **ದಿನಾಂಕ 31/05/2019ರೊಳಗೆ 2017-18ರ ಹಾಗೂ ಅದಕ್ಕೂ ಮುನ್ನ ಆರಂಭಿಸಿದ ಎಲ್ಲಾ ಗ್ರಾನೀಸ ಕಾಮಗಾರಿಗಳು ಮತ್ತು <ರೂ.5ಲಕ್ಷ ಅಂದಾಜು ಮೊತ್ತದ 2018-19ರಲ್ಲಿ ಕೈಗೊಂಡಿರುವ** ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ಬಿಲ್ ಪಾವತಿಸಬೇಕು.
2. ರೂ.5ಲಕ್ಷಕ್ಕಿಂತ ಕಡಿಮೆ ಅಥವಾ ಹೆಚ್ಚು ಮೊತ್ತದ ಯಾವುದೇ ಕುಡಿಯುವ ನೀರಿನ ಕಾಮಗಾರಿಗಳು ಅನುಮೋದನೆಯಾದಂತೆ ಇನ್ನೂ ಪ್ರಾರಂಭವಾಗದಿದ್ದಲ್ಲಿ, ಸದರಿ ಕಾಮಗಾರಿಗಳನ್ನು ತತ್‌ಕ್ಷಣ ಕ್ರಿಯಾಯೋಜನೆಯಿಂದ ಕೈಬಿಡಬೇಕು ಮತ್ತು IMISನಲ್ಲಿ delete ಮಾಡಬೇಕು.
3. ಯಾವುದೇ ಕಾರಣಕ್ಕೂ 2019-20ರ ಸಾಲಿನಲ್ಲಿ Spillover ಕಾಮಗಾರಿ (MVS ಮತ್ತು ವಿಶೇಷ ತಾಂತ್ರಿಕ ಕಾರಣಗಳಿರುವ ಬೃಹತ್ ಯೋಜನೆಗಳನ್ನು ಹೊರತುಪಡಿಸಿ) ಗಳನ್ನು ಮುಂದುವರಿಸಲು ಅಥವಾ ಬಿಲ್ ಪಾವತಿಸಲು ಅವಕಾಶವಿರುವುದಿಲ್ಲ.
4. IMISನಿಂದ delete ಮಾಡಲಾದ ಯಾವುದೇ ಕುಡಿಯುವ ನೀರಿನ ಕಾಮಗಾರಿಯನ್ನು ಚಾಲ್ತಿ ಮಾರ್ಗಸೂಚಿಗಳನ್ವಯ ಅವಶ್ಯಕತೆಯಿದ್ದಲ್ಲಿ 2019-20ರ ಸಾಲಿನಲ್ಲಿ ಆರ್ಥಿಕ ಮತ್ತು

ತಾಂತ್ರಿಕ ಕಾರ್ಯಸಿಂಧುತ್ವ ಆಧರಿಸಿ ಆಯಾಯ ZP-CEOರವರು ಆಯುಕ್ತರು, ಗ್ರಾನೀಸ ರವರಿಗೆ ಜಾಗ್ರತೆಯಾಗಿ ಪ್ರಸ್ತಾಪಿಸಬೇಕು.

5. **ಕೇವಲ ಕಾಮಗಾರಿ ಮಂಜೂರಾಗಿದ್ದು ಅನುಷ್ಠಾನವಾಗಿಲ್ಲ, IMISನಲ್ಲಿ delete ಮಾಡಲಾಗಿದೆ ಮತ್ತು ಮುಂದಿನ ಸಾಲಿನಲ್ಲಿ ಅನುದಾನ ಲಭ್ಯತೆಯಿದೆ ಎಂಬ ಕಾರಣಕ್ಕಾಗಿ ಹೊಸ ಕುಡಿಯುವ ನೀರಿನ ಯೋಜನೆಯನ್ನು 2019-20ರ ಸಾಲಿನಲ್ಲಿ ಅಳವಡಿಸಲು ಅವಕಾಶ ಕಲ್ಪಿಸುವಂತಿಲ್ಲ. ಆಯಾ ಗ್ರಾಮ ಪಂಚಾಯತಿಗಳು ಸ್ಥಳೀಯ ನೀರು ಮತ್ತು ನೈರ್ಮಲ್ಯ ಸಮಿತಿ ಪ್ರಸ್ತಾಪ ಪರಿಶೀಲಿಸಿ ಶಿಫಾರಸ್ಸು ಮಾಡುವ ಅಗತ್ಯವಿರುವ ಕುಡಿಯುವ ನೀರಿನ ಯೋಜನೆಗಳನ್ನಾಧರಿಸಿ 2019-20ರ ಸಾಲಿನ ಕ್ರಿಯಾ ಯೋಜನೆ ತಯಾರಾಗಬೇಕಿದೆ. ಈ ಸಲುವಾಗಿ ಪ್ರತ್ಯೇಕ ಮಾರ್ಗಸೂಚಿಗಳನ್ನು ನೀಡಲಾಗುತ್ತದೆ.**
6. **ದಿನಾಂಕ 23/04/2019ರ ನಂತರ ಈಗಾಗಲೇ ಅನುಮೋದನೆಯಾಗಿರುವ >ರೂ.5ಲಕ್ಷ ಅಂದಾಜು ಮೊತ್ತದ ಕಾಮಗಾರಿಗಳನ್ನು ಅಥವಾ ಇತರೆ ಕಾರ್ಯಸಿಂಧುತ್ವವಿರುವ ತುರ್ತು** ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಳ್ಳಬೇಕಾದ್ದಲ್ಲಿ ಚುನಾವಣಾ ಆಯೋಗದ ಅನುಮತಿ ಪಡೆಯಲು ನಿಯಮಗಳನ್ವಯ Screening Committee ಒಪ್ಪಿಗೆ ಪಡೆದು ತಕ್ಷಣ ಸರ್ಕಾರಕ್ಕೆ ಜಿಲ್ಲಾವಾರು ಮತ್ತು ಯೋಜನಾವಾರು ಪ್ರಸ್ತಾಪ ಕಳುಹಿಸಬೇಕು.
7. ಕುಡಿಯುವ ನೀರಿನ ಬಾಬ್ತು ಯಾವುದೇ (ರಾಜ್ಯ ಮತ್ತು ಕೇಂದ್ರ ವಲಯ ಹಾಗೂ ಇತರೆ ಸರ್ಕಾರಿ ಅನುದಾನಗಳು) ಅನುದಾನ ವಿನಿಯೋಗವಾದಲ್ಲಿ **ಕಡ್ಡಾಯವಾಗಿ IMISನಲ್ಲಿ ದಾಖಲಿಸಬೇಕು ಮತ್ತು ಪಾವತಿಗಳು ಗಾಂಧಿಸಾಕ್ಷಿ (GSK) ಕಾಯಕದಲ್ಲಿ** ನಮೂದಾಗಿರುವುದನ್ನು CEOಗಳು ಪರಿಶೀಲಿಸಿಕೊಳ್ಳಬೇಕು ಹಾಗೂ ವೆಚ್ಚದ ವಿವರಗಳನ್ನು ಸಿಂಡಿಕೇಟ್ ಬ್ಯಾಂಕ್ ವೆಚ್ಚದ ವಿವರಗಳೊಂದಿಗೆ (ಜಿಲ್ಲಾವಾರು ಮತ್ತು ಘಟಕವಾರು) ತಾಳೆಯಾಗುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು. ಈ ಸಲುವಾಗಿ ಅಗತ್ಯವಿರುವ ಕಾಲಕಾಲಿಕ reconciliation ಪ್ರಕ್ರಿಯೆ ಮಾಡತಕ್ಕದ್ದು.
8. **SCP/TSP ಹಾಗೂ SDPಯಡಿ ಪ್ರಗತಿ ತೀವ್ರಗೊಳಿಸಿ ವೆಚ್ಚ ದಾಖಲಿಸಲು ಹಾಗೂ DSS ವೆಚ್ಚವನ್ನು ಖಜಾನೆ ವೆಚ್ಚಕ್ಕೆ ತಾಳೆಯಾಗುವಂತೆ ಸಮರ್ಪಕವಾಗಿ Onlineನಲ್ಲಿ ಇಂಧೀಕರಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು.**
9. ನೀರು ಶುದ್ಧೀಕರಣ (WPP) ಘಟಕಗಳ ಅನುಷ್ಠಾನ ಮತ್ತು ನಿರ್ವಹಣೆ ಸಂಬಂಧ ಈಗಾಗಲೇ ಹಿಂದಿನ ಸಭಾ ನಡವಳಿಗಳಲ್ಲಿ ನಿರ್ದೇಶಿಸಿರುವ ರೀತಿ ಮತ್ತು ಆಯುಕ್ತರು ಗ್ರಾನೀಸ ಸೂಚಿಸಿರುವ ಮಾನದಂಡಗಳನ್ವಯ ಕ್ರಮವಹಿಸಬೇಕು.

ಪ್ರಸಕ್ತ ಬೇಸಿಗೆಯಲ್ಲಿ ಜನ ಜಾನುವಾರುಗಳ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಳ್ಳದಂತೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಜಿಲ್ಲಾಧಿಕಾರಿಗಳ ಸಮನ್ವಯದಲ್ಲಿ ಕೈಗೊಳ್ಳತಕ್ಕದ್ದು. ಈ ಸಂಬಂಧ ತುರ್ತು ದುರಸ್ಥಿ, ಪುನಶ್ಚೇತನ, ಖಾಸಗಿ Borewellಗಳ ಸೇವೆ ಪಡೆಯುವುದು, ಸಾಗಾಣಿಕೆ ಮುಖೇನ ನೀರು ಪೂರೈಕೆ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಕೊಳವೆಬಾವಿ ಕೊರೆಯುವಂತಹ ಪ್ರಕ್ರಿಯೆಗಳನ್ನು ಸ್ಥಳೀಯ ಅಗತ್ಯತೆ ಆಧರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಜಿಲ್ಲೆಗೆ ಲಭ್ಯವಾಗಿರುವ ಅನುದಾನದ ಮಿತಿಯೊಳಗೆ ತುರ್ತು ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಬೇಕು.

ಕುಡಿಯುವ ನೀರಿನ ವಸ್ತುಸ್ಥಿತಿ ಪರಿವೀಕ್ಷಣೆಯನ್ನು **ಜೂನ್.2019ರವರೆಗೆ** ಪ್ರತಿವಾರ ಹೋಬಳಿ/ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಮಾಡಬೇಕು. ಹಾಗೂ **ಸಹಾಯವಾಣಿ ಕೇಂದ್ರಗಳು**

ಚುರುಕಾಗಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಬೇಕು. ಈ ಸಂಬಂಧ ಅಗತ್ಯವಿರುವ Nodal ಅಧಿಕಾರಿಗಳನ್ನು ನೇಮಿಸಿ ಎಲ್ಲಾ CEOಗಳು ಆದೇಶ ಹೊರಡಿಸಬೇಕು.

ಮೇಲ್ಕಂಡ ಸೂಚನೆಗಳ ಅನುಪಾಲನಾ ವರದಿಯನ್ನು ಕಳುಹಿಸುವುದರ ಜೊತೆಗೆ ಈಗಾಗಲೇ ತಿಳಿಸಿರುವ ರೀತಿ 2019-20ನೇ ಸಾಲಿನ ಗ್ರಾನೀಸ ಕ್ರಿಯಾ ಯೋಜನೆ ಸಿದ್ಧಪಡಿಸುವ ಕುರಿತು ಅಗತ್ಯ ಕ್ರಮ ಕೈಗೊಳ್ಳಬೇಕು ಮತ್ತು ತಾವು ಕೈಗೊಂಡಿರುವ ಕ್ರಮ ಕುರಿತು ಮುಂದಿನ ಏಪ್ರಿಲ್-**2019**ರ ವಿಡಿಯೋ ಸಂವಾದದಲ್ಲಿ ಪ್ರಾತ್ಯಕ್ಷತೆ ನೀಡಲು ನಿರ್ದೇಶಿಸಿದೆ.

28/03/2019

**(ಎಲ್.ಕೆ.ಅತೀಕ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

1. ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ನಿರ್ದೇಶಕರು, ಪಂಚಾಯತ್ ರಾಜ್- 1/ಪಂಚಾಯತ್ ರಾಜ್-2/ಸ್ವಉ.ಕಾ/ಗ್ರಾಮ ವಿಕಾಸ/ಯೋಉಮಾ/ಇ-ಆಡಳಿತ/ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ ರಾಜ್ ಇಲಾಖೆ, ಬೆಂಗಳೂರು.
4. ಮುಖ್ಯ ಇಂಜಿನೀಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
5. ಎಲ್ಲಾ ಅಧೀಕ್ಷಕ ಅಭಿಯಂತರರುಗಳು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ.
6. ಎಲ್ಲಾ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
7. ನಿರ್ದೇಶಕರು, ಇ-ಆಡಳಿತ (ಈ ಸುತ್ತೋಲೆ/ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವೆಬ್‌ಸೈಟ್‌ನ್ನು ಪ್ರತಿಬಿಂಬಿಸಲು).
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

<u>ಪ್ರತಿ ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.